MVC No. 424/2023 PW-1

**<u>ದಿನಾಂಕ 22.01.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರಾದ ಆರ್ 2 ಪರ ಶ್ರೀ ಎಸ್ ವೈ ಎಸ್ ವಕೀಲರಿಂದಃ</u>**

ನಾನು 10 ವರ್ಷದಿಂದ ಆಟೋ ಚಾಲಕನಾಗಿದ್ದೇನೆ. ನನ್ನ ಬಳಿ ಡಿಎಲ್ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಬಳಿ ಬ್ಯಾಡ್ಜ (Badge) ಇದೆ. ಅಪಘಾತವಾದ ದಿನ ಪ್ಯಾಸೆಂಜರ್ ಆಟೋದಲ್ಲಿ ಬೆಂಗಳೂರಿನಿಂದ ಚನ್ನಪಟ್ಟಣಕ್ಕೆ ಬರುತ್ತಾ ಇದ್ದೆ. ಈ ಆಟೋ ಸಿರಾಜ್ ರವರಿಗೆ ಸೇರಿದ್ದು. ಈ ಆಟೋಗೆ ಬೆಂಗಳೂರಿನಲ್ಲಿ ಮಾತ್ರ ಚಾಲನೆ ಮಾಡಲು ಪರ್ ಮಿಟ್ ಇತ್ತು ಎಂದರೆ ನಿಜ. ಚನ್ನಪಟ್ಟಣದಲ್ಲಿ ಚಾಲನೆ ಮಾಡಲು ಪರ್ ಮಿಟ್ ಇರಲಿಲ್ಲ ಎಂದರೆ ನಿಜ. ನಾನು National highway ನಲ್ಲಿ ಬರುತ್ತಾ ಇದ್ದೆ. ಅಪಘಾತವು National highway ನಲ್ಲಿ ಆಗಿದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು Service Road ನಲ್ಲಿ ಹೋಗುತ್ತಾ ಇದ್ದೆ ಎಂದು ನುಡಿಯುತ್ತಾರೆ. ನನಗೆ ದ್ವಿಚಕ್ರ ವಾಹನದಿಂದ ಆಟೋಗೆ ತಾಗಿರುತ್ತದೆ. ದ್ವಿಚಕ್ರವಾಹನದ ತಪ್ಪು ಇಲ್ಲ ಎಂದರೆ ಸುಳ್ಳು. ದ್ವಿಚಕ್ರವಾಹನದ ವಿರುದ್ದ ದೂರು ನೀಡಿರುತ್ತೇನೆ. ಸಿರಾಜ್ ರವರು ಆಟೋವನ್ನು ಚಾಲನೆ ಮಾಡುವಾಗ ಮುಗುಚಿ ಬಿದ್ದಿರುತ್ತದೆ. ಸಿರಾಜ್ ರವರಿಗೆ ಡಿಎಲ್ ಇದೆ. ಅವರನ್ನು ಕರೆದು ಸಾಕ್ಷಿ ನುಡಿಸಲು ತೊಂದರೆ ಇಲ್ಲ. ನಾನು ಸಲ್ಲಿಸಿರುವ ದಾಖಲೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನನ್ನ ದಾಖಲೆಯ ಪ್ರಕಾರ ಸಿರಾಜ್ ರವರ ತಪ್ಪಿ ನಿಂದ ಅಪಘಾತವಾಗಿದೆ ಎಂದರೆ ನಿಜ. ಅಪಪಘಾತವನ್ನು ನೋಡಿದ ಪ್ರತ್ಯಕ್ಷದರ್ಶಿಯವರಿಂದ ಸಾಕ್ಷಿ ನುಡಿಸಲು ತೊಂದರೆ ಇಲ್ಲ. ನನ್ನ ಸ್ನೇಹಿತ ಹರೀಶ್ ರವರು ನನ್ನನ್ನು ಆಸ್ಪತ್ರೆ ಕರೆದುಕೊಂಡು ಹೋಗಿರುತ್ತಾರೆ. ನಾವು ಆಟೋದಲ್ಲಿ 3 ಜನರು ಇದ್ದೆವು. ನಾನು ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ನನಗೆ ಚಿಕಿತ್ಸೆ ನೀಡಿದ ವೈದ್ಯಾಧಿಕಾರಿಯವರನ್ನು ಕರೆತಂದು ಸಾಕ್ಷಿ ನುಡಿಸಲು ತೊಂದರೆ ಇಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನನ್ನ ವೈದ್ಯಕೀಯ ಚಿಕಿತ್ಸೆಗಾಗಿ 3 ಲಕ್ಷ ರೂಪಾಯಿ ಹಣ ಖರ್ಚಾಗಿದೆ ಎಂದು ಹೇಳಿದ್ದು ಅದು ಸುಳ್ಳು ಎಂದರೆ ಸುಳ್ಳು. ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನನಗೆ ಅಪಘಾತವಾಗುವುದಕ್ಕಿಂತ ಮುಂಚೆ ನಾನು ಕೆಲಸ ಮಾಡಿ ತಿಂಗಳಿಗೆ 30 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಹೇಳಿದ್ದು ಆ ರೀತಿ ಹೇಳಿರುವುದು ಸುಳ್ಳು ಎಂದರೆ ಸುಳ್ಳು. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ನಿಜ. ನನ್ನ ಬಳಿ

ಪಡಿತರ ಚೀಟಿ ಇಲ್ಲ. ನನ್ನ ಮುಂದುವರೆದ ಚಿಕಿತ್ಸೆಗಾಗಿ ಅಂದಾಜು ವೆಚ್ಚ ಹಾಜರುಪಡಿಸಿಲ್ಲ. ನಾನು ಮೊದಲಿನಂತೆ ಆರೋಗ್ಯವಾಗಿದ್ದೇನೆ ಎಂದರೆ ಸುಳ್ಳು. ನನಗೆ ಯಾವುದೇ ಆರ್ಥಿಕ ಮತ್ತು ದೈಹಿಕ ನಷ್ಟ ಉಂಟಾಗಿಲ್ಲವೆಂದರೆ ಸುಳ್ಳು. ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸುಳ್ಳು. ದ್ವಿಚಕ್ರ ವಾಹನ ತಾಗಿದ್ದರಿಂದ ಆಟೋದಲ್ಲಿದ್ದವರಿಂದ ಯಾವುದೇ ಹಾನಿ ಉಂಟಾಗಿಲ್ಲ ಎಂದರೆ ನಿಜ. ಆಗ ನಾನೇ ಆಟೋ ಚಾಲನೆ ಮಾಡುತ್ತಿದ್ದೆ. ಸಿರಾಜ್ ರವರು ಆಟೋ ಚಾಲನೆ ಮಾಡುತ್ತಿದ್ದರು ಎಂದು ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸುಳ್ಳು.

**<u>ಮರುವಿಚಾರಣೆ: ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಓ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**